# ಊಟಕ್ಕೆ ಬಂದೆವು ನಾವು ನಿಮ್ಮ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 86.
2. **Ref.:** Dasara Padagalu – Purandara Dasara Keerthane, Samyukta Samputa, edited by Shri Pavanje Gururao, Sriman Madhwa Siddantha Granthalaya, Udupi, page No. 88.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 141.
4. **Note:** Lyrics given without highlights are as per Ref. 1 & 2. The wordings given in Ref. 3 are same as in Ref. 1 with few minor differences which are given in yellow highlights.
5. **Note:** Singer has followed lyrics as in Ref. 1.
6. **Note:** As per my research work, lyrics given in Ref. 3 are more approriate.

| | |
|---|---|
| ರಾಗ: ನಾದನಾಮಕ್ರಿಯೆ ತಾಳ: ಅಟ್ಟ | ರಾಗ: ವರಾಳಿ ತಾಳ: ಅಟ |
| | |
| ಊಟಕ್ಕೆ ಬಂದೆವು ನಾವು ನಿಮ್ಮ | ಊಟಕ್ಕೆ ಬಂದೆವು ನಿನ್ನ |
| ಆಟ ಪಾಠವ ಬಿಟ್ಟು ಅಡುಗೆ ಮಾಡಮ್ಮ || ಪ || | ಕೋಟಲೆಗಳ ಬಿಟ್ಟು ಅಡುಗೆ ಮಾಡಮ್ಮ |
| | |
| ಕತ್ತಲಿಟ್ಟಾವಮ್ಮ ಕಣ್ಣು ಬಾಯಿ | ಕತ್ತಲಿಕ್ಕುತಲಿವೆ ಕಣ್ಣು ಬಲು |
| ಬತ್ತಿ ಬರುತಲಿದೆ ಕೈಕಾಲು ಝುಮ್ಮು | ಒತ್ತಿ ಬರುತಲಿವೆ ಕೈಕಾಲ ಝುಮ್ಮ |
| ಹೊತ್ತ ಹೋಗಿಸಬೇಡವಮ್ಮ ಒಂದು | ಹೊತ್ತ ಹೋಗಿಸಬೇಡವಮ್ಮ ಒಂದು |
| ತುತ್ತಾದರು ಇತ್ತು ಸಲಹು ನಮ್ಮಮ್ಮ || ೧ || | ತುತ್ತಾದರು ಮಾಡಿ ಇಕ್ಕುವುದು ಧರ್ಮ |
| | |
| ಒಡಲೊಳಗೆ ಉಸಿರಿಲ್ಲ ಒಂದು | ಒಡಲೊಳಗುಸಿರಿಲ್ಲವಮ್ಮ, ಗಳಿಗೆ |
| ಕ್ಷಣವಾದರೆ ಜೀವ ನಿಲ್ಲುವುದಿಲ್ಲ | ತಡವಾದರೀ ಪ್ರಾಣ ಉಳಿವುದಿಲ್ಲವಮ್ಮ |
| ಮಡಿದರೆ ದೋಷ ತಟ್ಟುವುದು ಒಂದು | ನುಡಿಯು ಚಿತ್ತಕೆ ಬರಲಮ್ಮ, ಒಂದು |
| ಹಿಡಿ ಅಕ್ಕಿಯಿಂದಲೆ ಕೀರ್ತಿ ಬಾಹೋದು || ೨ || | ಹಿಡಿ ಅಕ್ಕಿ ಅನ್ನದಿ ಕೀರ್ತಿ ಪಡೆಯಮ್ಮ |
| | |
| ಹೊನ್ನರಾಶಿಯ ತಂದು ಸುರಿಯೆ ಕೋಟಿ | ಹೊನ್ನರಾಶಿಗಳನು ಸುರಿಯೆ ಕೋಟಿ |
| ಕನ್ನಿಕೆಯರ ತಂದು ಧಾರೆಯನೆರೆಯೆ | ಕನ್ನೆ ಧರಿತ್ರಿಯ ಧಾರೆಯನೆರೆಯೆ |
| ಅನ್ನದಾನಕ್ಕಿನ್ನು ಸರಿಯೆ ಪ್ರ- | ಅನ್ನದಾನಕೆ ಇನ್ನು ಸರಿಯೆ ನಮ್ಮ |
| ಸನ್ನ ಪುರಂದರ ವಿಠಲ ದೊರೆಯೆ || ೩ || | ಚೆನ್ನ ಪುರಂದರ ವಿಠಲನೊಳ್ ಬೆರೆಯೆ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಅನ್ನದಾನವು ಶ್ರೇಷ್ಠವೆಂದೂ ಅವಶ್ಯವೆಂದೂ ತಿಳಿದ ದಾಸರು ಅದರ ವಿಷಯಕವಾದ ಸಾಹಿತ್ಯ ಪರ್ಯಾಯದಲ್ಲಿ ಈ ಹಾಡಿನಲ್ಲಿ ಹೇಳಿದ್ದಾರೆ.

**ಕೋಟಲೆ** = ಕಷ್ಟ

**ಕತ್ತಲಿಕ್ಕು** = ಕತ್ತಲೆ ಬರು

**Classification:** Keerthane
**Ankita:** purandara vittala
**Location:** NA
**Category:** Sankeerna, Jeevana Darshana,
**Sub-Category:** oota, ATa, aduge, kannu, kai, udara, jiva, anna, keerti, bangara, daana, arasa,
**Pravachana:** NA
**Explanation:** NA